# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 17/07/2021 ರಂದು ಬೆಳಗ್ಗೆ 11-00.ಗಂಟೆಗೆ ವಾರ್ಡ್-16 ಜಾಲಹಳ್ಳಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಕೆಗಳು

**ಹಾಜರಿದ್ದ ಅಧಿಕಾರಿಗಳು**

| ಕ್ರ ಸಂ | ಅಧ್ಯಕ್ಷರು/ ಸದಸ್ಯರ ಹೆಸರು | ಪದನಾಮ/ಇಲಾಖೆ |
|---|---|---|
| 1 | ಶ್ರೀ.ಹೆಚ್.ಎಸ್.ದಯಾನಂದ್ | ಸ.ಕಾ.ನಿ.ಅ, ವಾರ್ಡ್ ನೋಡಲ್ ಅಧಿಕಾರಿಗಳು |
| 2 | ಶ್ರೀ.ರಘುನಾಥ್.ಟಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 3 | ಶ್ರೀ.ರವಿಕುಮಾರ್.ಕೆ.ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ವೇಣುಗೋಪಾಲ್ | ಕಂದಾಯ ವಸೂಲಿಗಾರರು, ವಾರ್ಡ್-16 |
| 5 | ಶ್ರೀಮತಿ.ಗೌರಿ.ಆರ್ | ಕೋವಿಡ್ ವೈದ್ಯರು |
| 6 | ಶ್ರೀಮತಿ.ಹೆಚ್.ಭಾಗ್ಯಲಕ್ಷ್ಮೀ | ಹೋಯ್ಸಳಾ ಪೋಲೀಸ್ |
| 7 | ಶ್ರೀ.ಪ್ರದೀಪ್ ಕುಮಾರ್ | ಜೆ.ಇ. ಬೆಸ್ಕಾಂ |
| 8 | ಶ್ರೀ.ನಾಗರಾಜು | ಪೌರಕಾರ್ಮಿಕರ ಮೇಲ್ವಿಚಾರಕರು |

ಮಾನ್ಯ ಅಧ್ಯಕ್ಷರ ಮಾತನಾಡಿ ಕೋವಿಡ್-19 ಬಗ್ಗೆ ಎಚ್ಚರಿಕಾ ಕ್ರಮವಹಿಸಲು ಸೂಚಿಸಿದರು ಹಾಗೂ ವಾರ್ಡ್ ಸಮಿತಿಯಲ್ಲಿ 45 ವರ್ಷ ಮೇಲ್ಪಟ್ಟವರಿಗೆ ವ್ಯಾಕ್ಸಿನೇಷನ್ ಆಗಿರುವ ಬಗ್ಗೆ ವಿಚಾರಿಸಿದರು

- ಕೋವಿಡ್ ಪರೀಕ್ಷೆ ಕಡ್ಡಾಯವಾಗಿ ಪ್ರತಿನಿತ್ಯ ನಡೆಸಲು ಡಿಹೆಚ್‌ಸಿ ವೈದ್ಯರ ಬಳಿ ವಿಚಾರಿಸಿದರು.
- ಎಸ್.ಎಸ್.ಎಲ್.ಸಿ ಪರೀಕ್ಷಾ ಕೊಠಡಿಗಳಿಗೆ ಕಡ್ಡಾಯವಾಗಿ ಸ್ಯಾನಿಟೈಷನ್ ಮಾಡಲು ಮಾನ್ಯ ಅಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಎಸ್.ಎಸ್.ಎಲ್.ಸಿ ಪರೀಕ್ಷೆಗೆ ತೆಗೆದುಕೊಳ್ಳಬೇಕಾಗುವ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಗಮನವಿಡಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಜಾಲಹಳ್ಳಿ ಪೋಲೀಸ್ ಅಧಿಕಾರಿಗಳು ಮಾತನಾಡಿ ಎಚ್.ಎಂ.ಟಿ. ಬಳಿ ತ್ಯಾಜ್ಯಗಳನ್ನು ಹಾಕುವುದರಿಂದ ಅಲ್ಲಿನ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು. ಅದಕ್ಕೆ ಮಾನ್ಯ ಅಧ್ಯಕ್ಷರು ಮಾತನಾಡಿ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಗಮನಹರಿಸಲು ಸೂಚಿಸಿದರು
- ಕಾಳಿಂಗರಾವ್ ವೃತ್ತದ ಬಳಿ ಹಾಗೂ ಎಚ್.ಎಂ.ಟಿ. ಬಳಿ ಮರಗಳು ಎಲೆಕ್ಟ್ರಿಕ್ ವೈರ್‌ಗಳಿಗೆ ತಗುಲಿ ಪವರ್ ಕಟ್ ಆಗುತ್ತಿರುವುದು ಕಂಡು ಬಂದಿದ್ದು, ಪೋಲೀಸ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಅದನ್ನು ಬೆಸ್ಕಾಂ ಅಧಿಕಾರಿಗಳಿಗೆ ಸರಿಪಡಿಸಲು ಸೂಚಿಸಿದರು.
- ಘನ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕಿರಿಯ ಆರೋಗ್ಯ ಅಧಿಕಾರಿಗಳ ಬಳಿ ವಿಚಾರಿಸಿದರು
- ಜಾಲಹಳ್ಳಿ ಪೋಲೀಸ್ ಅಧಿಕಾರಿಗಳು ಮಾತನಾಡಿ, ಕದಂಬ ಹೋಟೆಲ್ ಬಳಿ ಮರದ ಕೊಂಬೆ ಮುರಿದು ಬಿದಿದ್ದು, ಅದನ್ನು ತೆರವುಗೊಳಿಸಿಕೊಡುವಂತೆ ತಿಳಿಸಿದರು. ಮಾನ್ಯ ಅಧ್ಯಕ್ಷರು ಸಹಾಯಕ ಅಭಿಯಂತರರಿಗೆ ಕ್ರಮವಹಿಸಲು ಸೂಚಿಸಿದರು..

ಮೇಲ್ಕಂಡ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಂದಾಯ ಪರಿವೀಕ್ಷಕರು ಹಾಗೂ
ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ-16 ಜಾಲಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

17/7

ಶ್ರೀ.ಹೆಚ್.ಎಸ್.ದಯಾನಂದ್
ಸ.ಕಾ.ನಿ.ಅ ಹಾಗೂ ವಾರ್ಡ್‌ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-16 ಜಾಲಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ